359 (436) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕಿನ ತಿಮ್ಮಾಪುರ ಏತ ನೀರಾವರಿ ಯೋಜನೆಗೆ ಪ್ರಸ್ತುತ ಹಣಕಾಸು ವರ್ಷದಲ್ಲಿ ತೊಡಗಿಸಿದ ಹಣವೆಷ್ಟು?

ಆ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಪ್ರಸ್ತುತ ಸಾಲಿನ ಅಯವ್ಯಯದಲ್ಲಿ ಈ ಯೋಜನೆಗೆ ರೂ.27.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ.

ಆ) ಈ ಕಾಮಗಾರಿಗೆ ಈಗಾಗಲೇ ಸವಿಸ್ತಾರವಾದ ಯೋಜನಾ ವರದಿಯನ್ನು ತಯಾರಿಸಿ ಭಾರಿ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿಯ (ಎಂ.ಐ.ಪಿ.ಸಿ ಬೋರ್ಡ್) ಅನುಮೋದನೆಗಾಗಿ ಮಂಡಿಸಲಾಗಿದ್ದು, ಅನುಮೋದನೆಯ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

360 (903) ಶ್ರೀ ಸಿದ್ದು ಸಾವದಿ (ಜಮಖಂಡಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಡಿಹುಡಿ ತೊದಲಬಾಗಿ ಏತ ನೀರಾವರಿ, ಸರ್ಕಾರ ಅಥವಾ ಖಾಸಗಿ ಇವರೆಡರಲ್ಲಿ ಒಳಪಟ್ಟಿರುವುದು ಯಾರಿಗೆ;

ಆ) ಸರ್ಕಾರದ ಉಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಜರುಗಿಲ್ಲವೇಕೆ;

ಇ) ಉಸ್ತುವಾರಿಗಾಗಿ ರೈತರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಸಂಗ್ರಹವಾಗಿರುವ ಹಣವೆಷ್ಟು; ಹಾಗೂ ಖರ್ಚು ಮಾಡಲಾಗಿರುವ ಹಣವೆಷ್ಟು;

ಈ) ಏತ ನೀರಾವರಿಗೆ ಒಳಪಡುವ (ಕಮಾಂಡ್) ಪ್ರದೇಶಗಳೆಷ್ಟು; ಈವರೆಗೆ ಎಷ್ಟು ಎಕರೆ ಪ್ರದೇಶಕ್ಕೆ ನೀರು ಬಿಡಲಾಗಿದೆ; ಹಾಗೂ ಈ ವರ್ಷದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ನೀರನ್ನು ಕೊಡಲಾಗುವುದು;

ಉ) ಭೀಕರ ಬರಗಾಲದಲ್ಲಿ ಸಮೀಪದ ಏತ ನೀರಾವರಿಯಿಂದ ಕೆರೆಗೆ ನೀರು ಬಿಡಲು ಸರ್ಕಾರದ ಆದೇಶ ಆಗಿದೆಯೇ; ಆಗಿದ್ದಲ್ಲಿ, ಅರ್ಧ ಕಿ.ಮೀ.ನಲ್ಲಿ ಹತ್ತಾರು ಹಳ್ಳಿಗಳಿಗೆ ಕುಡಿಯುವ ನೀರು ಸಿಗುವ ತೊದಲಬಾಗಿ ಕೆರೆಯನ್ನು ತುಂಬಿಸಿಲ್ಲವೇಕೆ;

ಊ) ಹಾಗಿದ್ದಲ್ಲಿ, ನೀರು ಬಿಡದೇ, ರೈತರಿಗೆ ಆಗಿರುವ ಹಾನಿಯೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) ಸರ್ಕಾರಕ್ಕೆ ಒಳಪಟ್ಟಿರುತ್ತದೆ.

ಆ) ಸರ್ಕಾರದ ಉಸ್ತುವಾರಿಯಲ್ಲಿಯೇ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

ಇ) ರೈತರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುತ್ತಿರುವುದು ತಿಳಿದು ಬಂದಿಲ್ಲ.

ಈ) ಅಡಿಹುಡಿ-ತೊದಲಬಾಗಿ ಏತ ನೀರಾವರಿ ಯೋಜನೆಯ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶ 2410 ಎಕರೆ ಇರುತ್ತದೆ. ಕಳೆದ ಸಾಲಿನಲ್ಲಿ 3223 ಎಕರೆ ಪ್ರದೇಶಕ್ಕೆ ನೀರು ಬಿಡಲಾಗಿದೆ. ಈ ವರ್ಷ 2410 ಎಕರೆ ಪ್ರದೇಶಕ್ಕೆ ನೀರು ಒದಗಿಸಲಾಗುವುದು.